

# ಆನ್ನಿ! ಮರೆಯಲಿ ಹ್ಯಾಂಗ...

■ ವಿಜಯ ಕಮತೆ

ಆ್ಯಮ್‌ಸ್ಟರ್‌ಡ್ಯಾಮ್‌ನಲ್ಲಿ ಇರುವ ಆನ್ನಿ ಫ್ರಾಂಕ್‌ಳ ಪ್ರತಿಮೆ

**ಯುದ್ಧದ ಸಮಯದಲ್ಲಿ ಯುವಕ–ಯುವತಿಯರ ಜೀವನದ ವಿನಾಶವನ್ನು ಪ್ರತಿನಿಧಿಸುವ ರೂಪಕವಾಗಿ ಆನ್ನಿ ಫ್ರಾಂಕ್‌ಳನ್ನು ಗುರ್ತಿಸಲಾಗುತ್ತದೆ. ಎರಡನೇ ಮಹಾಯುದ್ಧದ ಸಮಯದಲ್ಲಿ ಅಡಗುತಾಣದಲ್ಲಿರುವಾಗ ಆಕೆ ಬರೆದ ಡೈರಿಯ ಬರಹಗಳು ಮನುಷ್ಯನ ಕ್ರೌರ್ಯ ಮತ್ತು ಸ್ವಾತಂತ್ರ್ಯದ ಹಂಬಲದ ಕುರಿತು ಮಾತನಾಡುತ್ತವೆ. ಯುವತಿಯೊಬ್ಬಳ ಅಂತರಂಗದ ಪಿಸುನುಡಿಗಳಂತೆ ಕಾಣಿಸುತ್ತವೆ. ಜೂನ್ 12 ಈ ದುರಂತ ತರುಣಿಯ ಜನ್ಮದಿನ.**

‘ಆನ್ನಿ ಫ್ರಾಂಕ್’ ಎರಡನೇ ಮಹಾಯುದ್ಧದ ನಂತರ ಜಗತ್ತಿನಾದ್ಯಂತ ಹೆಸರು ಮಾಡಿದ ಬಾಲೆ. ಎಳೆಯ ಮನಸ್ಸಿನ ಭಾವನೆಗಳ ಮೇಲೆ ಯುದ್ಧಗಳಿಂದ ಬೀರುವ ಪರಿಣಾಮವನ್ನು ಬರಹದ ಮೂಲಕ ದಾಖಲಿಸಿದ ದಿಟ್ಟ ಹುಡುಗಿ. ಹದಿನೈದೇ ವರ್ಷ ಬಾಳಿ ಬದುಕಿದ ಆನ್ನಿ ಬರೆದ ಡೈರಿಯಲ್ಲಿನ ಬರಹಗಳು ಎಪ್ಪತ್ತಕ್ಕೂ ಹೆಚ್ಚಿನ ಭಾಷೆಗಳಿಗೆ ಅನುವಾದಗೊಂಡಿವೆ.

ಎರಡನೇ ಮಹಾಯುದ್ಧದಲ್ಲಿ ನಡೆದ ಯಹೂದಿ ಹತ್ಯಾಕಾಂಡದಲ್ಲಿ ಆನ್ನಿ ಬಲಿಯಾದಳು. 1947ರಲ್ಲಿ ಅವಳ ಡೈರಿಯ ಬರಹಗಳು ‘ದಿ ಡೈರಿ ಆಫ್ ಎ ಯಂಗ್ ಗರ್ಲ್’ ಹೆಸರಿನಲ್ಲಿ ಪ್ರಕಟಗೊಂಡವು. ಆ ಪುಸ್ತಕ ಅದೆಷ್ಟು ಪ್ರಸಿದ್ಧವಾಯಿತೆಂದರೆ, ವಿಶ್ವಪ್ರಸಿದ್ಧ ಪುಸ್ತಕಗಳ ಪಟ್ಟಿಯಲ್ಲಿ ಅದು ಗುರ್ತಿಸಿಕೊಂಡಿರುವುದಲ್ಲದೆ ಹಲವಾರು ನಾಟಕಗಳು ಮತ್ತು ಚಲನಚಿತ್ರಗಳಿಗೆ ಆಧಾರವಾಗಿದೆ.

ಆನ್ನಿ ಫ್ರಾಂಕ್ (ಜ: ಜೂನ್ 12, 1929) ಜರ್ಮನಿಯ ಯಹೂದಿ ಮನೆತನದಲ್ಲಿ ಹುಟ್ಟಿದವಳು. ತಾಯಿ ಎಡಿತ್ ಫ್ರಾಂಕ್. ತಂದೆ ಒಟ್ಟೊ ಹೆನ್ರಿಕ್ ಫ್ರಾಂಕ್. ಆಕೆಗೆ ಮೂರು ವರ್ಷ ದೊಡ್ಡವಳಾದ ಮಾರ್ಗಾಟ್ ಎಂಬ ಅಕ್ಕನಿದ್ದಳು. ಒಟ್ಟೊ ಫ್ರಾಂಕ್ ಆಹಾರ ಉತ್ಪನ್ನಗಳ ವ್ಯವಹಾರ ನಡೆಸುತ್ತಿದ್ದ ಉದ್ಯಮಿ. ಮನೆಯಲ್ಲಿ ದೊಡ್ಡ ಗ್ರಂಥಾಲಯ ಇದ್ದುದು ಮಕ್ಕಳಿಬ್ಬರೂ ಓದಿನ ಬಗ್ಗೆ ಆಸಕ್ತಿ ತಳೆಯಲು ಪ್ರೇರಣೆಯಾಯಿತು.

1930–33ರ ಸಮಯದಲ್ಲಿ ಜರ್ಮನಿಯಲ್ಲಿ ಅನೇಕ ಸಮಸ್ಯೆಗಳು ತಲೆದೋರಿದವು. ನಿರುದ್ಯೋಗ ಮತ್ತು ಬಡತನದಿಂದ ಜನ ಕಂಗೆಟ್ಟರು. ಇವೆಲ್ಲ ಸಮಸ್ಯೆಗಳಿಗೆ ಯಹೂದಿಗಳೇ ಕಾರಣವೆಂದು ಬಿಂಬಿಸಿ, ಅವರನ್ನು ನಾಜಿಗಳು ದ್ವೇಷಿಸುವಂತೆ ಮಾಡಲಾಯಿತು. 1933ರಲ್ಲಿ ನಾಜಿಗಳು ಅಧಿಕಾರಕ್ಕೆ ಬಂದಾಗ ಯಹೂದಿಗಳ ಮೇಲೆ ದ್ವೇಷ ಮತ್ತು ಅತ್ಯಾಚಾರಗಳು ಹೆಚ್ಚಾಗತೊಡಗಿದವು.

ಅಡಾಲ್ಫ್ ಹಿಟ್ಲರ್ ಪ್ರಭುತ್ವದ ದೌರ್ಜನ್ಯದಿಂದಾಗಿ ಯಹೂದಿಯರು ಬೇರೆ ಬೇರೆ ದೇಶಗಳಿಗೆ ವಲಸೆ ಹೋಗತೊಡಗಿದರು. ಒಟ್ಟೊ ಫ್ರಾಂಕ್ ತನ್ನ ಪರಿವಾರದ ರಕ್ಷಣೆಗಾಗಿ ನೆದರಲ್ಯಾಂಡ್ಸ್‌ಗೆ ತೆರಳಿದ.

ಹಿಟ್ಲರ್‌ನ ನಾಜಿ ಸೈನ್ಯವು 1940ರಲ್ಲಿ ನೆದರಲ್ಯಾಂಡ್ಸ್‌ನ್ನು ವಶಪಡಿಸಿಕೊಂಡಿತು. ಪರಿವಾರದ ಸಂರಕ್ಷಣೆಗಾಗಿ ಒಟ್ಟೊ ಫ್ರಾಂಕ್‌ಗೆ ತೋರಿದ ಕೊನೆಯ ಮತ್ತು ಏಕೈಕ ಮಾರ್ಗ, ಅಮೆರಿಕಕ್ಕೆ ವಲಸೆ ಹೋಗುವುದು. ಆದರೆ, ಅಮೆರಿಕದ ರಾಯಭಾರ ಕಚೇರಿ ಮುಚ್ಚಿದುದರಿಂದಾಗಿ ಅವನ ಆಸೆ ನೆರವೇರಲಿಲ್ಲ. ನಾಜಿಗಳಿಗೆ ಸೆರೆಸಿಗುವ ಆತಂಕದಿಂದ ಎಡಿತ್ ಮತ್ತು ಒಟ್ಟೊ ದಂಪತಿ ಮಕ್ಕಳೊಂದಿಗೆ ತಲೆಮರೆಸಿಕೊಳ್ಳಲು ಯೋಚಿಸಿದರು. ವ್ಯವಹಾರದ ಕಚೇರಿಯನ್ನೇ ರಹಸ್ಯ ಅಡಗುತಾಣವಾಗಿ ಮಾರ್ಪಡಿಸಿಕೊಂಡರು. ಅಲ್ಲಿ ಆತನಿಗೆ ತನ್ನ ಕೆಲವು ವಿಶ್ವಾಸಾರ್ಹ ಉದ್ಯೋಗಿಗಳು ಅವನ ಸಹಾಯಕರಾಗಿದ್ದರು. ಅಡಗುತಾಣದ ಪ್ರವೇಶ ದ್ವಾರವನ್ನು ನಾಜಿಗಳಿಗೆ ಪತ್ತೆಯಾಗದಂತೆ ಪುಸ್ತಕದ ರ್‍ಯಾಕಿನಿಂದ ಮುಚ್ಚಲಾಗಿತ್ತು.

ಅಡಗುತಾಣಕ್ಕೆ ಹೋಗುವ ಮುಂಚೆ ಆನ್ನಿ ತನ್ನ ಹದಿಮೂರನೇ ಹುಟ್ಟುಹಬ್ಬವಾದ 12ನೇ ಜೂನ್ 1942ರಂದು ಕೆಂಪು–ಬಿಳುಪು ಬಟ್ಟೆಯ ಹೊದಿಕೆ ಹೊಂದಿದ ಪುಸ್ತಕವನ್ನು ಉಡುಗೊರೆಯಾಗಿ ಪಡೆದಿದ್ದಳು. ಅದನ್ನು ಆಕೆ ಡೈರಿಯಾಗಿ ಬಳಸಲು ತೀರ್ಮಾನಿಸಿ ಬರೆಯಲು ಪ್ರಾರಂಭಿಸಿದಳು. ಹುಟ್ಟುಹಬ್ಬದ ದಿನದಂದೇ ಪುಸ್ತಕದಲ್ಲಿ ಬರೆಯಲು ಪ್ರಾರಂಭಿಸಿ, ‘ನಾನು ಯಾರನ್ನೂ ನಂಬಲು ಸಾಧ್ಯವಾಗದ ಕಾರಣ ನಿನಗೆ ಎಲ್ಲವನ್ನೂ ತಿಳಿಸಲು ಸಾಧ್ಯವಾಗುತ್ತಿದೆ ಎಂದು ಭಾವಿಸುತ್ತೇನೆ. ನಿನ್ನಿಂದ ನನಗೆ ನೆಮ್ಮದಿ ಮತ್ತು ಬೆಂಬಲ ದೊರೆಯುವುದೆಂದು ತಿಳಿಯುತ್ತೇನೆ’ ಎಂದು ಮೊದಲ ಬಾರಿಗೆ ಬರೆದಳು.

ಜೂನ್ 20, 1942ರಂದು ಯಹೂದಿಗಳ